MVC NO. 1493/2024

PW-2.

Dated: 22-04-2026

ಸಾಕ್ಷಿಯನ್ನು ಈ ದಿನ ದಿನಾಂಕ 22-04-2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಕುರಿತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಕುರಿತು ಸಲ್ಲಿಸಿರುತ್ತೇನೆ, ಅದರಲ್ಲಿ ಬರೆದಿರುವ ಎಲ್ಲ ಸಂಗತಿಗಳು ನನ್ನ ಜ್ಞಾನ ಮತ್ತು ತಿಳುವಳಿಕೆ ಮೇರೆಗೆ ನಿಜ ಇದ್ದು , ಅದರಲ್ಲಿರುವ ಸಹಿ ನಾನೇ ಮಾಡಿರುತ್ತೇನೆ.

ಮುಖ್ಯ ವಿಚಾರಣೆಃ ಅರ್ಜಿದಾರನ ಪರವಾಗಿ ಶ್ರೀ ಎಸ್ ಜಿ ಬಿ ವಕೀಲರಿಂದಃ

ಸಾಕ್ಷಿದಾರರು ತಾವು ನೀಡಿದ ಅಂಗ ನ್ಯೂನತೆ ಪ್ರಮಾಣ ಪತ್ರವನ್ನು ನಿಪಿ -22 ಅಂತಾ ಈಗಾಗಲೇ ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಸಹಿ ನಿಪಿ-22 (ಎ) ಅಂತಾ ಗುರುತಿಸಲಾಯಿತು

ಪಾಟೀ ಸವಾಲುಃ 1 ನೇ ಎದುರುದಾರ ಪರವಾಗಿ ಶ್ರೀ ಎಸ್ ಎಸ್ ಪಿ ವಕೀಲರಿಂದಃ.

ನಾನು ಅರ್ಜಿದಾರನಿಗೆ ಚಿಕಿತ್ಸೆ ನೀಡಿದ ವೈದ್ಯರಲ್ಲ ಎಂದರೆ ನಿಜ. ಅರ್ಜಿದಾರ ದಿನಾಂಕ 27-02-2026 ರಂದು ಅಂಗ ನ್ಯೂನತೆ ಪ್ರಮಾಣ ಪತ್ರ ಕೊರಿ ನನ್ನ ಹತ್ತಿರ ಬಂದಿರುತ್ತಾನೆ ಎಂದರೆ ನಿಜ. ಸರ್ಕಾರಿ ಆಸ್ಪತ್ರೆ ಬೈಲಹೊಂಗಲನ ವೈದ್ಯರು ಜಾರಿ ಮಾಡಿದ ನಿಪಿ -6 ಗಾಯದ ಪ್ರಮಾಣ ಪತ್ರದಲ್ಲಿ ಕೇವಲ 3 ಗಾಯಗಳು ಎಂದು ನಮೂದಿಸಿರುತ್ತಾರೆ ಎಂದರ ನಿಜ.

MVC NO. 1493/2024
PW-2.
Dated: 22-04-2026

ಅದರಲ್ಲಿ 2 ನೇ ಗಾಯ ಮಾತ್ರ ತೀವ್ರ ಸ್ವರೂಪದ ಗಾಯ ಅಂತಾ ಕಾಣಿಸಿದ್ದಾರೆ ಎಂದರೆ ಸರಿ. ಸದರಿ ತೀವ್ರ ಸ್ವರೂಪದ ಗಾಯ 30 x 20 ಸೆ. ಮಿ. ವಿಸ್ತೀರ್ಣದ ತರಚಿದ ಗಾಯ ಅಂತಾ ಕಾಣಿಸಿದ್ದಾರೆ ಎಂದರೆ ನಿಜ. ಸದರಿ ನಿಪಿ - 6 ರಲ್ಲಿ ಫ್ರಾಕ್ಚರ ಇಂಜುರಿ ಅಂತಾ ಎಲ್ಲಿಯೂ ನಮುದಿಸಿರುವುದಿಲ್ಲ ಎಂದರೆ ಸರಿಯಲ್ಲ. ಹೀಗಾಗಿ ಅರ್ಜಿದಾರ ವಿಜಯಾ ಆಸ್ಪತ್ರೆ ಯಲ್ಲಿ ಖೊಟ್ಟಿ ಆಗಿ ಮೂಳೆ ಮೂರಿತ ಗಾಯ ಅಂತಾ ನಮೂದಿಸಿಕೊಂಡು ಬಂದಿರುತ್ತಾನೆ ಎಂದರೆ ಸರಿಯಲ್ಲ. ನಿಪಿ - 6 ರಲ್ಲಿ ಫ್ರಾಕ್ಚರ ಅಂತಾ ನಮೂದು ಇಲ್ಲದೇ ಇದ್ದರು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಸಹಾಯ ಮಾಡಲು ಮಾಲ ಯುನೈಟ ಅಂತಾ ನಮುದಿಸಿ ಸುಳ್ಳು ಅಂಗ ನ್ಯೂನತೆ ಪ್ರಮಾಣ ಪತ್ರ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರ ದಿನಾಂಕ 08-01-2024 ರಂದು ಆಸ್ಪತ್ರೆಯಿಂದ ಸಂಪೂರ್ಣ ಗುಣಮುಖವಾಗಿ ಬಂದಿರುತ್ತಾನೆ ಎಂದರೆ ಸರಿಯಲ್ಲ. ದಿನಾಂಕ 08-01-2024 ರಿಂದ 27-02-2026 ರ ವರೆಗೆ ಅರ್ಜಿದಾರ ಎಲ್ಲಿಯು ಸಹ ಅರ್ಜಿದಾರ ಮುಂದುವರೆದ ಚಿಕಿತ್ಸೆ ಪಡೆದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅರ್ಜಿದಾರ ತಾನು ಮುಂದುವರೆದ ಚಿಕಿತ್ಸೆ ಪಡೆದ ಕುರಿತು ಯಾವುದೇ ದಾಖಲಾತಿ ಹಾಜರು ಮಾಡಿರುವುದಿಲ್ಲ ಎಂದರೆ ಸರಿ. ಅರ್ಜಿದಾರ ಪರಿಹಾರ ಹಣ ಗೋಸ್ಕರ ತನಗೆ ಯಾವೋ ಮಾಳೆ ಮೂರಿತ ಗಾಯ ಇಲ್ಲದೇ ಇದ್ದರು ಸಹ ಮೂಳೆ ಮೂರಿತ ಅಂತಾ ದಾಖಲೆ ತಂದಿರುತ್ತಾನೆ ಅವನಿಗೆ ಸಹಾಯ ಮಾಡಲು ನಾನು ಖೊಟ್ಟಿ ಅಂಗ ನ್ಯೂನತೆ

MVC NO. 1493/2024
PW-2.
Dated: 22-04-2026

ಪ್ರಮಾಣ ಪತ್ರ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವಂತೆ ಮಾಲ ಯುನೈಟ ಉಂಟಾಗಿದ್ದರೇ ಸದರಿ ಗಾಯಗಳ ಮೇಲೆ ಬಾವು ಇರುತ್ತಿತ್ತು ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಯಾವುದೇ ಅಂಗ ನ್ಯೂನತೆ ಇಲ್ಲದೇ ಇರುವುದರಿಂದ ಯಾವುದೇ ಮುಂದುವರೆದ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ನಾನು ಸಹಾಯ ಮಾಡಲು ಶೇ 40 ಹೆಚ್ಚಿನ ಪ್ರಮಾಣದ ಅಂಗ ನ್ಯೂನತೆ ಪ್ರಮಾಣ ಪತ್ರ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಅರ್ಜಿದಾರ ಯಾವುದೇ ಅಂಗ ನ್ಯೂನತೆ ಇಲ್ಲದೇ ಇದ್ದರು ಸಹ ಖೊಟ್ಟಿ ಅಂಗ ನ್ಯೂನತೆ ಪ್ರಮಾಣ ಪತ್ರ ಜಾರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಗಣಕೀಕೃತ ಗೊಳಿಸಲಾಯಿತು )

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಬೈಲಹೊಂಗಲ.